

ಬೇಡ್ತಿ ನದಿಯ ಮಾಗೋಡು ಜಲಪಾತ




ಬೆಣ್ಣೆ ಹೊಳೆ ಜಲಪಾತ

## ನದಿಗಳ ಹಿನ್ನೆಲೆ

ಶಿರಸಿಯ ಶಂಕರಹೊಂಡದಲ್ಲಿ ಹುಟ್ಟುತ್ತದೆ ಎನ್ನಲಾಗುವ ಅಘನಾಶಿನಿ ನದಿಗೆ ನಿಜವಾಗಿ ಒಂದಲ್ಲ, ಸಾವಿರಾರು ಪರಿಶುದ್ಧ ನೀರೊರತೆಯ ಮೂಲಗಳಿವೆ. ಶಿರಸಿಯ ಹೊರತಾಗಿ ನದಿಯ ಇನ್ನೊಂದು ಬಹುಮುಖ್ಯ ಕವಲು ಮಂಜುಗುಣಿ ಕೆರೆಯಿಂದ ಹುಟ್ಟಿ ಬರುತ್ತದೆ. ಬೆಣ್ಣೆ ಹೊಳೆ, ಬಿಳಗಿ ಹೊಳೆಗಳೂ ಬಂದು ಸೇರಿ ಸಿದ್ದಾಪುರ ತಾಲ್ಲೂಕಿನುದ್ದಕ್ಕೂ ಹರಿದು ಕುಮಟಾ ತಾಲ್ಲೂಕಿನ ಅಘನಾಶಿನಿ ತದಡಿ ಊರುಗಳ ನಡುವೆ ಅರಬ್ಬಿ ಸಮುದ್ರವನ್ನು ಸೇರುತ್ತದೆ.

ಬೇಡ್ತಿ ನದಿ ಮೂಲತಃ ಧಾರವಾಡ ಜಿಲ್ಲೆಯಲ್ಲಿ ಹುಟ್ಟಿ ಗುಪ್ತಗಾಮಿನಿಯಾಗಿ ಹರಿಯುತ್ತದೆ. ಧಾರವಾಡ ಜಿಲ್ಲೆಯಲ್ಲಿ ಹುಟ್ಟಿದ ಏಕೈಕ ನದಿಯನ್ನು ಅಲ್ಲಿ ಶಾಲ್ಮಲಾ ಎಂದು ಕರೆಯಲಾಗುತ್ತದೆ. (ಸಾಹಿತಿ ಚಂಪಾ ಬರೆದ ಕವಿತೆ ‘ಎಲ್ಲೋ ಹುಟ್ಟಿ ಎಲ್ಲೋ ಬೆಳೆದು... ನನ್ನ ಶಾಲ್ಮಲಾ’ ಈ ನದಿ ಮೂಲದ ಕುರಿತೇ ಆಗಿದೆ.) ಅಲ್ಲಿಂದ ಕಂಡೂ ಕಾಣದಂತೆ ಹರಿದು ಉತ್ತರ ಕನ್ನಡ ಜಿಲ್ಲೆಯನ್ನು ಪ್ರವೇಶಿಸಿ, ಯಲ್ಲಾಪುರ ಮತ್ತು ಶಿರಸಿ ಭಾಗದ ಉಪನದಿಗಳನ್ನು, ಮಳೆಯಬ್ಬರವನ್ನು ಸೇರಿಕೊಂಡು ಅಂಕೋಲಾ ತಾಲ್ಲೂಕಿನಲ್ಲಿ ಗಂಗಾವಳಿಯಾಗಿ ಅರಬ್ಬಿ ಸಮುದ್ರ ಸೇರುತ್ತದೆ.



ಅಘನಾಶಿನಿ ನದಿಯ ಉಂಚಳ್ಳಿ ಜಲಪಾತ

ವೇದಾವತಿಗೆ ಜೋಡಿಸುವ ನದಿ ತಿರುವು ಯೋಜನೆ ರೂಪುಗೊಳ್ಳುತ್ತಿರುವ ಸಂಗತಿ ಮತ್ತೊಮ್ಮೆ ತಲ್ಲಣ ಮೂಡಿಸಿದೆ. ಸಿದ್ದಾಪುರ ತಾಲ್ಲೂಕು ಬಾಳೆಕೊಪ್ಪ ಬಳಿ ಅಣೆಕಟ್ಟು ನಿರ್ಮಿಸಿ ನೀರನ್ನು ವೇದಾವತಿ ನದಿಯ ವಾಣಿವಿಲಾಸ ಜಲಾಶಯಕ್ಕೆ ಸಾಗಿಸುವ ಯೋಜನೆ ಇದಾಗಿದ್ದು, ನದಿಯ ನೀರನ್ನು ಪಂಪ್ ಮಾಡಿ ಗೋಳಿಮಕ್ಕಿ, ಹಾರ್ಸಿಕಟ್ಟಾ, ಸಿದ್ದಾಪುರ, ಸಾಗರ, ಶಿವಮೊಗ್ಗ, ತರೀಕೆರೆ, ಅಜ್ಜಂಪುರ ಮಾರ್ಗವಾಗಿ ಕೊಂಡೊಯ್ಯುವ ಉದ್ದೇಶ ಹೊಂದಲಾಗಿದೆ. ಸುಮಾರು 35 ಟಿಎಂಸಿ ನೀರನ್ನು ಅಘನಾಶಿನಿಯಿಂದ ಕೊಂಡೊಯ್ಯುವ ಅಂದಾಜು ಮಾಡಲಾಗಿದೆ. ಯೋಜನೆ ಜಾರಿಯಿಂದ ಲಕ್ಷಾಂತರ ಮರಗಳು ಆಹುತಿಯಾಗಲಿವೆ. ಸುಮಾರು 600 ಎಕರೆ ಅರಣ್ಯ ಯೋಜನೆಗೆ ಬಲಿಯಾಗಲಿದ್ದು ಶಿರಸಿ, ಸಾಗರ ಅರಣ್ಯ ವಿಭಾಗಗಳ ವ್ಯಾಪ್ತಿಯ ಅರಣ್ಯಕ್ಕೆ ಯೋಜನೆ ಕಂಟಕ ತರಲಿದೆ.

ಶಿರಸಿ, ಸಿದ್ದಾಪುರ, ಕುಮಟಾ ತಾಲ್ಲೂಕುಗಳ ಕುಡಿಯುವ ನೀರಿನ ಸೌಕರ್ಯಗಳಿಗೆ ಮತ್ತು ಲಕ್ಷಾಂತರ ರೈತರ ಕೃಷಿ ಜಮೀನಿಗೆ ನೀರು ಒದಗಿಸುವ ಅಘನಾಶಿನಿಯ ಈ ‘ನದಿ ತಿರುವು’ ಯೋಜನೆಯಿಂದ ಜನಸಾಮಾನ್ಯರ ಜೀವನಕ್ಕಲ್ಲದೆ ಪಶ್ಚಿಮ ಘಟ್ಟದ ಜೀವವೈವಿಧ್ಯತೆಗೆ ಅಪಾರ ಧಕ್ಕೆ ಉಂಟಾಗಲಿದೆ. ಅಘನಾಶಿನಿ ಕಣಿವೆಯು ಈಗಾಗಲೇ ಭೂಕುಸಿತ ಸೂಕ್ಷ್ಮ ಪ್ರದೇಶವಾಗಿ ಗುರುತಿಸಲ್ಪಟ್ಟಿದ್ದು ಭೂಕುಸಿತಕ್ಕೆ ಕಾರಣವಾಗುವ ಸಾಧ್ಯತೆಗಳು ಹೆಚ್ಚಲಿವೆ. ಕುಮಟಾ ಕರಾವಳಿ ಮೀನುಗಾರರು ಮತ್ತು ರೈತರ ಬದುಕು ಅಘನಾಶಿನಿ ನದಿ ನೀರನ್ನೇ ಅವಲಂಬಿಸಿದ್ದು, ಯೋಜನೆ ಕರಾವಳಿ ಮೀನುಗಾರರ ಮತ್ತು ರೈತರ ಬದುಕನ್ನು ಕಸಿದುಕೊಳ್ಳಲಿದೆ ಎಂದು ಪರಿಸರ ತಜ್ಞರು ಎಚ್ಚರಿಸುತ್ತಿದ್ದಾರೆ.

ಜಿಲ್ಲೆಯ ನದಿ ಬವಣೆ ಇಲ್ಲಿಗೇ ನಿಲ್ಲದೆ ಇನ್ನೊಂದು ಪುಟ್ಟ ನದಿಯಾದ ‘ಬೇಡ್ತಿ ನದಿ ನೀರು ತಿರುವು’ ಯೋಜನೆಯೂ ಮುನ್ನೆಲೆಗೆ ಬಂದಿದೆ. ಬೇಡ್ತಿ ನದಿಯನ್ನು ಹಾವೇರಿ ಜಿಲ್ಲೆಯ ವರದಾ ನದಿಗೆ ತಿರುಗಿಸಿ ಆ ಮೂಲಕ ತುಂಗಭದ್ರಾ ನದಿಗೆ ಜೋಡಿಸುವ ಯೋಜನೆ ಇದಾಗಿದ್ದು, ಮಲೆನಾಡು ಮತ್ತು ಕರಾವಳಿ ಭಾಗದ ಜನರ ತಲ್ಲಣಕ್ಕೆ, ಪರಿಸರ ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಗಿದೆ. ಪಶ್ಚಿಮ ಘಟ್ಟದುದ್ದಕ್ಕೂ ಹರಿದು ಗಂಗಾವಳಿಯಾಗಿ ಅಂಕೋಲಾ ಬಳಿ ಅರಬ್ಬಿ ಸಮುದ್ರ